ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕುಮಾರಪಾರ್ಕ್ ಪಶ್ಚಿಮ, ಟಿ.ಚೌಡಯ್ಯ ರಸ್ತೆ, ಬೆಂಗಳೂರು 560 020.

E-mail: bdadcf2024@gmail.com

ಸಂಖ್ಯೆ:ಬಿಡಿಎ/ಡಿಸಿಎಫ್/KRIDE-BSRP/e-ಟೆಂಡರ್/ಸಿಆರ್/08/2025-26 ದಿನಾಂಕ: 19/02/2026

ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ

1. ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ 2026-27 ನೇ ಸಾಲಿನಲ್ಲಿ KRIDE-BSRP ಯೋಜನೆಗೆ ಸಂಬಂಧಿಸಿದಂತೆ ಈ ಕೆಳಕಂಡ ಅನುಸೂಚಿಯಲ್ಲಿ ನಮೂದಿಸಿರುವ ಪರಿಹಾರಾತ್ಮಕ ಅರಣ್ಯೀಕರಣ ಕಾಮಗಾರಿಗಳಾದ ಮಾನ್ಸೂನ್ ನೆಡುತೋಪು ನಿರ್ವಹಿಸುವ ಕಾಮಗಾರಿಗಳನ್ನು ಕೈಗೊಳ್ಳಲು ಕರ್ನಾಟಕ ಅರಣ್ಯ ಇಲಾಖೆಯ ವಿವಿಧ ಅರಣ್ಯ ವಿಭಾಗಗಳಲ್ಲಿ 2025-26 ನೇ ಸಾಲಿನಲ್ಲಿ ನೊಂದಾಯಿಸಿಕೊಂಡಿರುವ ಅರ್ಹ ಅರಣ್ಯ ಗುತ್ತಿಗೆದಾರರಿಗೆ ಕರ್ನಾಟಕ ಸರ್ಕಾರದ ಇ-ಪೋರ್ಟಲ್ https://kppp.karnataka.gov.in ಮೂಲಕ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟರ್ ನಲ್ಲಿ ಟೆಂಡರ್ ಅನ್ನು ಆಹ್ವಾನಿಸಲಾಗಿದೆ.
2. 2026-27 ನೇ ಸಾಲಿನಲ್ಲಿ KRIDE-BSRP ಇವರ ಪರವಾಗಿ ಪ್ರಾಧಿಕಾರದ ಅರಣ್ಯ ವಿಭಾಗದಿಂದ ಈಗಾಗಲೇ ನಿರ್ಮಿಸಿರುವ 12 ಪರಿಹಾರಾತ್ಮಕ ನೆಡುತೋಪು ಕಾಮಗಾರಿಗಳನ್ನು ಮುಂದಿನ 2026-27 ನೇ ಸಾಲಿನಿಂದ (2026-27-ಮೊದಲನೇ ವರ್ಷದ ನೆಡುತೋಪು ನಿರ್ವಹಣೆ, 2027-28-ಎರಡನೇ ವರ್ಷದ ನೆಡುತೋಪು ನಿರ್ವಹಣೆ, 2028-29-ಮೂರನೇ ಹಾಗೂ ಅಂತಿಮ ವರ್ಷದ ನೆಡುತೋಪು ನಿರ್ವಹಣೆ) ನೆಡುತೋಪು ನಿರ್ವಹಣೆ ಕಾಮಗಾರಿಗಳನ್ನು KRIDE-BSRP, ಬೆಂಗಳೂರು ಸಂಸ್ಥೆಯ ಅನುದಾನದಲ್ಲಿ "ಪರಿಹಾರಾತ್ಮಕ ನೆಡುತೋಪು" (Compensatory Afforestation) ಯೋಜನೆಯಡಿಯಲ್ಲಿ ಅನುಷ್ಠಾನಗೊಳಿಸಬೇಕಾಗಿದ್ದು, ಸದರಿ ನೆಡುತೋಪಿನ ಮೂರು ವರ್ಷದ ನಿರ್ವಹಣೆ ಕಾಮಗಾರಿಗಳನ್ನು (2026-27 ರಿಂದ 2028-29 ರವರೆಗೆ) KRIDE-BSRP, ಬೆಂಗಳೂರು ಸಂಸ್ಥೆಯೊಂದಿಗೆ ದಿನಾಂಕ: 24/01/2025 ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅರಣ್ಯ ವಿಭಾಗವು ಮಾಡಿಕೊಂಡಿರುವ Memorandum of Understanding (MoU) ನಲ್ಲಿರುವ ಷರತ್ತುಗಳನ್ವಯ ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವುದಕ್ಕೆ ಟೆಂಡರ್‌ದಾರರು ಬದ್ಧನಾಗಿರಬೇಕು.
3. ಯಶಸ್ವಿ ಟೆಂಡರ್ ದಾರರು ಸದರಿ ನೆಡುತೋಪು ನಿರ್ವಹಿಸುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಅವಧಿಯಲ್ಲಿ ಮಾನ್ಯ ಉಚ್ಛ ನ್ಯಾಯಾಲಯ, ಬೆಂಗಳೂರು ಇವರಿಂದ ನೇಮಿಸಿರುವ ವೃಕ್ಷ ತಜ್ಞರ ಸಮಿತಿ – Tree Expert Committee (TEC); ಅರಣ್ಯ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ KRIDE-BSRP, ಬೆಂಗಳೂರು ಇವುಗಳ ಸದಸ್ಯರು/ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕಾಲಕಾಲಕ್ಕೆ ಮಾಡುವ ಸ್ಥಳ ಪರಿಶೀಲನೆಗೆ ಹಾಗೂ ಕೋರುವ ವರದಿಗಳಿಗೆ ಸೂಕ್ತ ಸಹಕಾರ ನೀಡಲು ಬದ್ಧರಾಗಿರಬೇಕು.
4. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಟೆಂಡರ್‌ದಾರರು ಟೆಂಡರ್ ಫಾರಂಗಳನ್ನು ವೆಬ್‌ಸೈಟ್ www.eproc.karnataka.gov.in ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು
5. ಈ ಕೆಳಗಿನ ಅನುಸೂಚಿ ಯಲ್ಲಿನ ಕಲಂ. ಸಂಖ್ಯೆ 08 ರಲ್ಲಿ ನಮೂದಿಸಿರುವ ಇ.ಎಂ.ಡಿ ಹಣವನ್ನು ಇ-ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ ಆನ್‌ಲೈನ್‌ನಲ್ಲಿಯೇ ಸಂಬಂಧಿಸಿದ ಬ್ಯಾಂಕ್‌ನಲ್ಲಿ ಪಾವತಿಸಬೇಕಾಗುತ್ತದೆ.

6. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಲಯ ಅರಣ್ಯಾಧಿಕಾರಿ, ಅರಣ್ಯ ವಿಭಾಗ, ಬಿಡಿಎ ಇವರನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಅನುಸೂಚಿ:–

KRIDE-BSRP ರವರ ಅನುದಾನದಲ್ಲಿ 2026–27 ರಿಂದ 2028–29 ರವರೆಗೆ ಪ್ರಾಧಿಕಾರದ ಅರಣ್ಯ ವಿಭಾಗದಿಂದ ಅನುಷ್ಠಾನಗೊಳಿಸಬೇಕಾದ ಪರಿಹಾರಾತ್ಮಕ ನೆಡುತೋಪುಗಳ ಮೂರು ವರ್ಷದ ನೆಡುತೋಪು ನಿರ್ವಹಣೆ ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ:–

MAINTENANCE OF ONE, TWO AND THREE YEAR OLD PLANTATION IN NADA PRABHU KEMPEGOWDA LAYOUT (NPKL), BDA FOR THE YEAR 2026-27 TO 2028-29.									
1	2	3	4	5	6	(4+5+6)= (7)	8	9	10
Sl. no	**Name of the work and Location**	**No. of seedlings**	**Tender estimate amount for maintenance of one year old plantation (in Rs.) 2026-27**	**Tender estimate amount for maintenance of two year old plantation (in Rs.) 2027-28**	**Tender estimate amount for maintenance of three year old plantation (in Rs.) 2028-29**	**Tender estimate amount Total (in Rs.)**	**EMD**	**Date of Completion of Work**	**Category**
1	MAINTENANCE OF ONE, TWO AND THREE YEAR OLD PLANTATION IN NADAPRABHU KEMPEGOWDA LAYOUT BLOCK - 1 (PART-A) FOR THE YEAR 2026-27 to 2028-29.	2700	17,62,002/-	10,65,484/-	2,47,694/-	30,75,165/-	30752	1st year 31-03-2027, 2nd year 31-03-2028, 3rd year 31-03-2029	SC
2	MAINTENANCE OF ONE, TWO AND THREE YEAR OLD PLANTATION IN NADAPRABHU KEMPEGOWDA LAYOUT BLOCK - 1 (PART-B) FOR THE YEAR 2026-27 TO 2028-29.	2100	13,70,446/-	8,28,710/-	2,41,634/-	24,40,788/-	48816	1st year 31-03-2027, 2nd year 31-03-2028, 3rd year 31-03-2029	OTHERS
3	MAINTENANCE OF ONE, TWO AND THREE YEAR OLD PLANTATION IN NADAPRABHU KEMPEGOWDA LAYOUT BLOCK - 2 FOR THE YEAR 2026-27 TO 2028-29.	2700	17,62,002/-	10,65,484/-	2,47,694/-	30,75,165/-	30752	1st year 31-03-2027, 2nd year 31-03-2028, 3rd year 31-03-2029	SC
4	MAINTENANCE OF ONE, TWO AND THREE YEAR OLD PLANTATION IN NADAPRABHU KEMPEGOWDA LAYOUT BLOCK - 3 FOR THE YEAR 2026-27 TO 2028-29.	2700	17,62,002/-	10,65,484/-	2,47,694/-	30,75,165/-	61503	1st year 31-03-2027, 2nd year 31-03-2028, 3rd year 31-03-2029	OTHERS
5	MAINTENANCE OF ONE, TWO AND THREE YEAR OLD PLANTATION IN NADAPRABHU	1800	11,74,688/-	7,10,323/-	2,38,604/-	21,23,586/-	42472	1st year 31-03-2027, 2nd year	OTHERS

	KEMPEGOWDA LAYOUT BLOCK - 4 (PART-A) FOR THE YEAR 2026-27 TO 2028-29.							31-03-2028, 3rd year 31-03-2029	
6	MAINTENANCE OF ONE, TWO AND THREE YEAR OLD PLANTATION IN NADAPRABHU KEMPEGOWDA LAYOUT BLOCK - 4 (PART-B) FOR THE YEAR 2026-27 TO 2028-29.	1800	11,74,688/-	7,10,323/-	2,38,604/-	21,23,586/-	42472	1st year 31-03-2027, 2nd year 31-03-2028, 3rd year 31-03-2029	CAT-II (A)
7	MAINTENANCE OF ONE, TWO AND THREE YEAR OLD PLANTATION IN NADAPRABHU KEMPEGOWDA LAYOUT BLOCK - 5 FOR THE YEAR 2026-27 TO 2028-29.	2700	17,62,002/-	10,65,484/-	2,47,694/-	30,75,165/-	30752	1st year 31-03-2027, 2nd year 31-03-2028, 3rd year 31-03-2029	ST
8	MAINTENANCE OF ONE, TWO AND THREE YEAR OLD PLANTATION IN NADAPRABHU KEMPEGOWDA LAYOUT BLOCK - 6 (PART-A) FOR THE YEAR 2026-27 TO 2028-29.	2700	17,62,002/-	10,65,484/-	2,47,694/-	30,75,165/-	61504	1st year 31-03-2027, 2nd year 31-03-2028, 3rd year 31-03-2029	OTHERS
9	MAINTENANCE OF ONE, TWO AND THREE YEAR OLD PLANTATION IN NADAPRABHU KEMPEGOWDA LAYOUT BLOCK - 6 (PART-B) FOR THE YEAR 2026-27 TO 2028-29.	2700	17,62,002/-	10,65,484/-	2,47,694/-	30,75,165/-	61504	1st year 31-03-2027, 2nd year 31-03-2028, 3rd year 31-03-2029	CAT-II (A)
10	MAINTENANCE OF ONE, TWO AND THREE YEAR OLD PLANTATION IN NADAPRABHU KEMPEGOWDA LAYOUT BLOCK - 7 FOR THE YEAR 2026-27 TO 2028-29.	2700	17,62,002/-	10,65,484/-	2,47,694/-	30,75,165/-	61504	1st year 31-03-2027, 2nd year 31-03-2028, 3rd year 31-03-2029	OTHERS
11	MAINTENANCE OF ONE, TWO AND THREE YEAR OLD PLANTATION IN NADAPRABHU KEMPEGOWDA LAYOUT BLOCK - 8 (PART-A) FOR THE YEAR 2026-27 TO 2028-29.	2700	17,62,002/-	10,65,484/-	2,47,694/-	30,75,165/-	61504	1st year 31-03-2027, 2nd year 31-03-2028, 3rd year 31-03-2029	OTHERS
12	MAINTENANCE OF ONE, TWO AND THREE YEAR OLD PLANTATION IN NADAPRABHU KEMPEGOWDA LAYOUT BLOCK - 8 (PART-B) FOR THE YEAR 2026-27 TO 2028-29.	2700	17,62,002/-	10,65,484/-	2,47,694/-	30,75,165/-	61504	1st year 31-03-2027, 2nd year 31-03-2028, 3rd year 31-03-2029	OTHERS

ಟೆಂಡರ್ ವೇಳಾಪಟ್ಟಿ:-

ಕ್ರ.ಸಂ	ವಿವರ		ದಿನಾಂಕ
1	ಟೆಂಡರ್ ಪ್ರಕಟಣೆ ನೀಡುವುದು		19/02/2026
2	ಟೆಂಡರ್ ಬಗ್ಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಕಡೆಯ ದಿನಾಂಕ		ದಿನಾಂಕ: 23/02/2026 ಅಪರಾಹ್ನ 4.00 ಗಂಟೆಗೆ
3	ಪ್ರೀ ಬಿಡ್ ಸಭೆಯ ದಿನಾಂಕ:		ದಿನಾಂಕ: 24/02/2026 ಪೂರ್ವಾಹ್ನ 10.00 ರಿಂದ 11.00 ಗಂಟೆಗೆ
4	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:		05/03/2026 ಅಪರಾಹ್ನ 4.00 ಗಂಟೆಗೆ
5	ಟೆಂಡರ್ ತೆರೆಯುವುದು	ತಾಂತ್ರಿಕ ಬಿಡ್	06/03/2026 ಅಪರಾಹ್ನ 4.00 ಗಂಟೆಗೆ
		ಆರ್ಥಿಕ ಬಿಡ್	ತಾಂತ್ರಿಕ ಬಿಡ್ ಗಳ ಪರಿಶೀಲನೆಯ ನಂತರ
6	ಸದರಿ ದಿನದಂದು ಟೆಂಡರ್ ಪ್ರಕ್ರಿಯೆ ನಡೆಯದಿದ್ದಲ್ಲಿ/ ಬಿಡ್ ಸ್ವೀಕರಿಸದಿದ್ದಲ್ಲಿ ಎರಡನೇ ಕರೆಯ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ		ದಿನಾಂಕ: 11/03/2026 ಅಪರಾಹ್ನ 4.00 ಗಂಟೆಗೆ
7	ಟೆಂಡರ್ ತೆರೆಯುವುದು	ತಾಂತ್ರಿಕ ಬಿಡ್	ದಿನಾಂಕ: 12/03/2026 ಅಪರಾಹ್ನ 4.00 ಗಂಟೆಗೆ
		ಆರ್ಥಿಕ ಬಿಡ್	ತಾಂತ್ರಿಕ ಬಿಡ್ ಗಳ ಪರಿಶೀಲನೆಯ ನಂತರ
8	ಒಂದನೇ ಹಾಗೂ ಎರಡನೇ ಇ-ಟೆಂಡರ್‌ನಲ್ಲಿ ಯಾವುದೇ ಟೆಂಡರ್‌ದಾರರು ಭಾಗವಹಿಸದೇ ಇದ್ದ ಪಕ್ಷದಲ್ಲಿ ಮೂರನೇ ಕರೆಯ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ		ದಿನಾಂಕ: 18/03/2026 ಅಪರಾಹ್ನ 4.00 ಗಂಟೆಯವರೆಗೆ
9	ಟೆಂಡರ್ ತೆರೆಯುವುದು	ತಾಂತ್ರಿಕ ಬಿಡ್	ಅಪರಾಹ್ನ 4.00 ಗಂಟೆಗೆ
		ಆರ್ಥಿಕ ಬಿಡ್	ತಾಂತ್ರಿಕ ಬಿಡ್ ಗಳ ಪರಿಶೀಲನೆಯ ನಂತರ
	(ಎರಡು ಮತ್ತು ಮೂರನೇ ಟೆಂಡರ್ ಕರೆಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಯಾವುದೇ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ.)		

ಮೇಲಿನ ದಿನಾಂಕಗಳಂದು ಸಾರ್ವತ್ರಿಕ ರಜೆಯಿದ್ದಲ್ಲಿ/ ಸಾರ್ವತ್ರಿಕ ರಜೆಯೆಂದು ಘೋಷಣೆಯಾದಲ್ಲಿ ಮುಂದಿನ ದಿನಾಂಕಗಳನ್ನು ಪರಿಗಣಿಸುವುದು.

1. ಟೆಂಡರ್ ಮೌಲ್ಯಮಾಪನ [ಪರಿಶೀಲನಾ] ಸಮಿತಿ:

ಪಾರದರ್ಶಕ ಅಧಿನಿಯಮದ ಪ್ರಕಾರ ಟೆಂಡರ್‌ಗಳ ಪರಿಶೀಲನೆಗೆ ಈ ಕೆಳಕಂಡ ಅಧಿಕಾರಿಗಳನ್ನೊಳಗೊಂಡ ಟೆಂಡರ್ ಮೌಲ್ಯಮಾಪನ ಸಮಿತಿಯನ್ನು ರಚಿಸಲಾಗಿದೆ **(ಮಾನ್ಯ ಆಯುಕ್ತರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ರವರ ಆದೇಶದಂತೆ ರಚನೆಗೊಂಡಿರುವ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಬಿಡಿಎ/ಡಿಸಿಎಫ್/ಟೆಂಡರ್/01/2024-25 ದಿನಾಂಕ:05-05-2025)**

1	ಅಭಿಯಂತರ ಸದಸ್ಯರು	ಅಧ್ಯಕ್ಷರು
2	ಆರ್ಥಿಕ ಸದಸ್ಯರು	ಸದಸ್ಯರು
3	ಉಪ ಅರಣ್ಯ ಸಂರಕ್ಷಣಾಧಿಕಾರಿ	ಸದಸ್ಯರು
4	ವಲಯ ಅರಣ್ಯಾಧಿಕಾರಿ	ಸದಸ್ಯ ಕಾರ್ಯದರ್ಶಿ

2. ಟೆಂಡರ್ ಆಹ್ವಾನಿಸುವ ಪ್ರಾಧಿಕಾರ:

ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

3. ಟೆಂಡರ್ ಅಂಗೀಕರಿಸುವ/ತಿರಸ್ಕರಿಸುವ ಪ್ರಾಧಿಕಾರ:

ಮಾನ್ಯ ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

4. ಟೆಂಡರ್ ಮೇಲ್ಮನವಿ ಪ್ರಾಧಿಕಾರ :

ಪ್ರಾಧಿಕಾರದ ಮಂಡಳಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

5. ದ್ವಿ–ಲಕೋಟೆ ಪದ್ಧತಿ :

ಕರ್ನಾಟಕ ಸರ್ಕಾರದ ಪಾರದರ್ಶಕತೆ ಅಧಿನಿಯಮ 1999 ರ ಮತ್ತು ಮುಂದುವರೆದ ನಿಯಮ 2000 ರನ್ವಯ ಟೆಂಡರ್ ಪ್ರಕ್ರಿಯೆಯಲ್ಲಿ ಎರಡು ಲಕೋಟೆ ಪದ್ಧತಿಯನ್ನು ಅಳವಡಿಸಲಾಗಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು

ಸಾಮಾನ್ಯ ಷರತ್ತುಗಳು:–

1. ಟೆಂಡರನಲ್ಲಿ ಭಾಗವಹಿಸುವ ಅರಣ್ಯ ಗುತ್ತಿಗೆದಾರರು ಕಡ್ಡಾಯವಾಗಿ ನಿಗಧಿಪಡಿಸಿರುವ ಸ್ಥಳಗಳನ್ನು ಪರಿಶೀಲನೆ ಮಾಡಿಕೊಂಡು ಭಾಗವಹಿಸತಕ್ಕದ್ದು, ಟೆಂಡರ್‌ನಲ್ಲಿ ಭಾಗವಹಿಸಿದ ನಂತರ ಸ್ಥಳದ ಬಗ್ಗೆ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಮೂರು ವರ್ಷಗಳ ಅವಧಿಯ ಕಾಲ ಪರಿಹಾರಾತ್ಮಕ ನೆಡುತೋಪು ನಿರ್ವಹಣೆ ಕಾಮಗಾರಿಗಳನ್ನು ಪ್ರಾಧಿಕಾರದ ಬಡಾವಣೆಗಳ ವ್ಯಾಪ್ತಿಯಲ್ಲಿ ಪ್ರಾಧಿಕಾರದ ಅರಣ್ಯ ವಿಭಾಗದಿಂದ ಕೈಗೊಳ್ಳಬೇಕಾಗಿರುವುದರಿಂದ ಅನುದಾನ ಒದಗಿಸುತ್ತಿರುವ KRIDE-BSRP ಸಂಸ್ಥೆಯೊಂದಿಗೆ ದಿನಾಂಕ: 24/01/2025 ರಂದು ಮಾಡಿಕೊಂಡಿರುವ MoU ರಂತೆ ಕಾಮಗಾರಿಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲು ಟೆಂಡರ್‌ದಾರರು ಕಡ್ಡಾಯವಾಗಿ ಬದ್ದರಿರಬೇಕು.
2. 2026–27 ರಿಂದ 2028–29 ನೇ ಸಾಲಿನವರೆಗೆ ಕೈಗೊಳ್ಳುವ 03 ವರ್ಷಗಳ ನೆಡುತೋಪು ನಿರ್ವಹಣೆ ಕಾಮಗಾರಿಗಳನ್ನು ದಿ: 31–03–2029 ರವರೆಗೆ ಮಂಜೂರಾದ ಅಂದಾಜು ಪಟ್ಟಿಗಳ ಹಾಗೂ ಕಾರ್ಯಾದೇಶದ ಅನ್ವಯ ಕಡ್ಡಾಯವಾಗಿ ನಿರ್ವಹಣೆ ಮಾಡಬೇಕಾಗಿರುತ್ತದೆ.
3. ಸದರಿ ನೆಡುತೋಪು ನಿರ್ವಹಣೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಸ್ಥಳೀಯ ಉತ್ತಮ ಬೆಳವಣಿಗೆ ಇರುವ ವಿವಿಧ ಜಾತಿಯ ಸಸಿಗಳನ್ನು 14"x20" ಅಳತೆಯ ಚೀಲಗಳಲ್ಲಿ ಬೆಳೆಸಿರುವ ಗೋಣಿ, ಹೊಂಗೆ, ಹೊನ್ನೆ, ಹಿಪ್ಪೆ, ತೊರೆಮತ್ತಿ, ಜಂಬುನೇರಳೆ, ಆಲ, ಮಹಾಗನಿ, ತಪಸಿ, ಸೀತಾಫಲ, ಮುತ್ತಗ, ಕರಿಜಾಲಿ, ಬನ್ನಿ, ಬಾರೆ, ಕಾಡುಗೇರು, ಬಾಗೆ ಇತ್ಯಾದಿ ಸ್ಥಳೀಯ ಸಸಿಗಳನ್ನು ಮಾತ್ರ Causality replacement ನಲ್ಲಿ ನೆಡಬೇಕಾಗಿರುತ್ತದೆ. ಅದರಂತೆ ಪರಿಹಾರಾತ್ಮಕ ನೆಡುತೋಪು ಕಾಮಗಾರಿಗಳಿಗೆ ನೆಡಲು ಖರೀದಿಸುವ 14"x20" ಸಸಿಗಳನ್ನು ಸಸಿಗಳ ಗುಣಮಟ್ಟ, ಬೆಳವಣಿಗೆ ಮತ್ತು ಎತ್ತರವನ್ನು ಪರಿಗಣಿಸಿ ಆಯ್ಕೆ ಮಾಡುವ ನಿರ್ಧಾರರವು

ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರದ್ದಾಗಿರುತ್ತದೆ. ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರ ಆಯ್ಕೆಯ ಸಸಿಗಳನ್ನು ನೆಡಲು ಬದ್ದರಾಗಿರಬೇಕು. ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರ ಆಯ್ಕೆಯೇ ಅಂತಿಮವಾಗಿರುತ್ತದೆ, ಯಾವುದೇ ಅನ್ಯದೇಶೀಯ ಅಥವಾ ಸ್ಥಳೀಯವಲ್ಲದ 14"x20" ಸಸಿಗಳನ್ನು ನೆಡುವುದನ್ನು ಕಡ್ಡಾಯವಾಗಿ ನಿಷೇಧಿಸಿದೆ.

4. ವಿವಿಧ ಅರಣ್ಯೀಕರಣ ಕಾಮಗಾರಿಗಳನ್ನು ಋತುಮಾನಕ್ಕನುಗುಣವಾಗಿ ಕೈಗೊಳ್ಳಬೇಕಾಗಿರುವುದರಿಂದ ಟೆಂಡರ್ ಮತ್ತು ಕರಾರು ಪ್ರಕ್ರಿಯೆ ವಿಳಂಬವಾದಲ್ಲಿ ಸದರಿ ಕಾಮಗಾರಿಗಳನ್ನು ಇಲಾಖೆ ಮುಖಾಂತರ ಕೈಗೊಳ್ಳಲು ಕ್ರಮ ಜರುಗಿಸಲಾಗುವುದು. ಅದಕ್ಕೆ ತಗುಲಿದ ವೆಚ್ಚವನ್ನು ಟೆಂಡರ್ ಮೊತ್ತದಿಂದ ಕಡಿತಗೊಳಿಸಿ ಇಲಾಖಾ ದರದನ್ವಯದಲ್ಲಿಯೇ ಪಾವತಿಗೆ ಕ್ರಮವಹಿಸಲಾಗುವುದು.
5. ಟೆಂಡರ್ ಪ್ರಕಟಣೆಯ ಯಾವುದೇ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಮರು ಟೆಂಡರ್ ಕರೆದು ಕೆಲಸ ಮಾಡಿಸುವ, ಯಾವುದೇ ಕಾರಣವನ್ನು ನೀಡದೆ ಟೆಂಡರನ್ನು ರದ್ದು ಪಡಿಸುವ ಅಧಿಕಾರವು ಈ ಕೆಳ ಸಹಿದಾರರಿಗಿರುತ್ತದೆ.
6. ಟೆಂಡರುದಾರರು ಆದಾಯ ತೆರಿಗೆ, ಜಿಎಸ್‌ಟಿ, ವೃತ್ತಿ ತೆರಿಗೆ ಹಾಗೂ ತೀರುವಳಿ ಪತ್ರಗಳನ್ನು ಸಂಬಂದಿಸಿದ ಇಲಾಖೆಗಳಿಂದ ಪಡೆದು ಟೆಂಡರಿನ ಜೊತೆಯಲ್ಲಿ ಲಗತ್ತಿಸಿರಬೇಕು.
7. ಟೆಂಡರ್‌ದಾರರು ತಮ್ಮ ದರವನ್ನು ನಮೂದಿಸುವಾಗ ಪ್ರತಿ ಕಾಮಗಾರಿಗೆ ಇಲಾಖಾ ದರದ ಮೇಲೆ ಶೇಕಡವಾರು ಇಷ್ಟು ಹೆಚ್ಚು, ಕಡಿಮೆ ಅಥವಾ ಎಸ್‌ಎಸ್‌ಆರ್ ದರಕ್ಕನುಗುಣವಾಗಿ ಎಂದು ದರವನ್ನು ಸ್ಪಷ್ಟವಾಗಿ ಅಂಕಿ ಮತ್ತು ಅಕ್ಷರಗಳಲ್ಲಿ ನಮೂಧಿಸಬೇಕು.
8. ಅನುಸೂಚಿಯಲ್ಲಿ ನಮೂದಿಸಿರುವ ಕಾಮಗಾರಿಗಳ ಮೊತ್ತ 2025–26 ನೇ ಸಾಲಿನ ಘಟಕ ದರ ಹಾಗೂ ಕರ್ನಾಟಕ ಅರಣ್ಯ ಇಲಾಖೆಯ ಎಸ್.ಎಸ್.ಆರ್. ದರದನ್ವಯ ಅಂದಾಜಿಸಲಾಗಿರುತ್ತದೆ. ಕರಾರು ಒಪ್ಪಂದವನ್ನು ಎಸ್.ಎಸ್.ಆರ್. [2025–26] ದರದನ್ವಯ ಮಾಡಿಕೊಳ್ಳಲಾಗುವುದು. ಟೆಂಡರ್ ಆಹ್ವಾನಿಸಲಾದ ಕಾಮಗಾರಿಗಳಿಗೆ ಅನುದಾನ ಬಿಡುಗಡೆಯಾಗಬಹುದಾದ ನಿರೀಕ್ಷೆಯಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಅನುದಾನದ ಲಭ್ಯತೆ ಮೇಲೆ ಕೆಲಸ ನಿರ್ವಹಿಸಬೇಕಾಗಿರುತ್ತದೆ. ಅನುದಾನ ಲಭ್ಯವಿಲ್ಲದ ಪಕ್ಷದಲ್ಲಿ ಅನುದಾನ ಬಿಡುಗಡೆ ನಂತರ ಪಾವತಿಸಲಾಗುವುದು. ಸದರಿ ಕಾಮಗಾರಿಗಳ ಸ್ಥಳ, ಪರಿಮಾಣ (ವಿಸ್ತೀರ್ಣ / ಸಂಖ್ಯೆ ಇತ್ಯಾದಿ)ಗಳಿಗೆ ಸೂಚಿಸಿರುವ ಅನುದಾನ ಅಂದಾಜಿನದಾಗಿದ್ದು, ಮೇಲಾಧಿಕಾರಿಗಳ ಅನುಮೋದನೆಯ ನಿಬಂಧನೆಗೊಳಪಟ್ಟಿರುತ್ತದೆ. ನೆಡುತೋಪುಗಳನ್ನು ಭಾಗಶಃ/ಪೂರ್ಣ ಸ್ಥಳಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಬಡಾವಣೆಯ ವ್ಯಾಪ್ತಿಯ ಒಂದು ಬ್ಲಾಕ್ ನಿಂದ ಮತ್ತೊಂದು ಬ್ಲಾಕ್ ಗೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಅನಿವಾರ್ಯ ಸಂದರ್ಭ ಒದಗಿ ಬಂದಲ್ಲಿ ಬದಲಾಯಿಸಲಾಗುವುದು, ಬದಲಾವಣೆಯಾದ ಸ್ಥಳದಲ್ಲಿ ಕಾಮಗಾರಿ ನಿರ್ವಹಿಸಲು ಟೆಂಡರ್‌ದಾರರು ಬದ್ದರಿರಬೇಕು ಹಾಗೂ ಅನುದಾನ ಹಂಚಿಕೆಯಾಗದ ಪಕ್ಷದಲ್ಲಿ ಸಂಪೂರ್ಣ ಟೆಂಡರನ್ನು ರದ್ದುಗೊಳಿಸಲು ಈ ಕೆಳಸಹಿದಾರರು ಅಧಿಕಾರ ಹೊಂದಿರುತ್ತಾರೆ.
9. ಈ ವಿಷಯದಲ್ಲಿ ಅಂತಿಮವಾಗಿ ಯಾವುದೇ ತಿದ್ದುಪಡಿಯನ್ನು ಮಾಡುವ, ನಿಯಮ ನಿಬಂಧನೆ ಸೇರಿಸುವ ಅಧಿಕಾರ ಈ ಕೆಳಸಹಿದಾರರಿಗಿರುತ್ತದೆ. ಗುತ್ತಿಗೆದಾರರು ಇದಕ್ಕೆ ಬದ್ಧರಾಗಿರಬೇಕು. ಟೆಂಡರ್ ಆಹ್ವಾನಿಸುವ ಪ್ರಾಧಿಕಾರವು ತೆಗೆದು ಕೊಳ್ಳುವ ನಿರ್ಧಾರ ಅಂತಿಮವಾಗಿರುತ್ತದೆ.
10. ಅಪ್ರಾಪ್ತ ವಯಸ್ಕರು ಮತ್ತು ಯಾವುದೇ ಅರಣ್ಯ ವಿಭಾಗ/ಬಿ.ಬಿ.ಎಂ.ಪಿ ಅರಣ್ಯ ಘಟಕದ ವ್ಯಾಪ್ತಿಯಲ್ಲಿ ಕಾನೂನಿನನ್ವಯ ಅನರ್ಹರೆಂದು ತೀರ್ಮಾನಿಸಲ್ಪಟ್ಟ / ಕಪ್ಪು ಪಟ್ಟಿಯಲ್ಲಿರುವ ವ್ಯಕ್ತಿಗಳಿಂದ ಟೆಂಡರ್‌ನ್ನು ಸ್ವೀಕರಿಸಲಾಗುವುದಿಲ್ಲ. ಒಂದು ವೇಳೆ ಈ ಕೆಳ ಸಹಿದಾರರಿಗೆ ತಿಳಿಸದಂತೆ ಸದರಿ ವ್ಯಕ್ತಿಗಳು ಟೆಂಡರ್‌ನಲ್ಲಿ ಭಾಗವಹಿಸಿ ನಂತರ ಅದು ತಿಳಿದಲ್ಲಿ ಅಂತಹವರ ಗುತ್ತಿಗೆಯನ್ನು ಅನೂರ್ಜಿತಗೊಳಿಸಲಾಗುವುದು ಮತ್ತು ಅವರು ಪ್ರಾಧಿಕಾರಕ್ಕೆ ಸಲ್ಲಿಸಿರುವ ಇ.ಎಂ.ಡಿ. ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
11. ಮೇಲ್ಕಂಡ ಕಾಮಗಾರಿಗಳಿಗೆ ಯಾವುದೇ ಮುಂಗಡ ಹಣವನ್ನು ಪಾವತಿ ಮಾಡಲಾಗುವುದಿಲ್ಲ. ಕೆಲಸಗಳನ್ನು ಆಯಾಯ ಕಾಮಗಾರಿಗೆ ಸಂಬಂಧಿಸಿದಂತೆ ಕ್ಷೇತ್ರ ಸಿಬ್ಬಂಧಿಗಳಿಂದ ಹಾಗೂ ವಲಯ ಅರಣ್ಯಾಧಿಕಾರಿಗಳಿಂದ

ಪಡೆಯುವ ಪರಿಶೀಲನೆ ಹಾಗೂ ದೃಢೀಕರಣವನ್ನು ಅನುಸರಿಸಿ ಬಿಲ್ಲನ್ನು ಪಾವತಿ ಮಾಡಲಾಗುವುದು ಹಾಗೂ ಪಾವತಿಸುವ ಹಣದ ಮೇಲೆ ಚಾಲ್ತಿಯಲ್ಲಿರುವ ತೆರಿಗೆಗಳನ್ನು ಕಡಿತ ಮಾಡಲಾಗುವುದು. KRIDE ಸಂಸ್ಥೆಯಿಂದ ಹಣ ಬಿಡುಗಡೆ ತಡವಾದ ಪಕ್ಷದಲ್ಲಿ ಅಂತಹ ಹಣ ಪಾವತಿಗೆ ಯಾವುದೇ ತರಹದ ಬಡ್ಡಿ ನೀಡಲಾಗುವುದಿಲ್ಲ.

12. ಯಶಸ್ವಿ ಟೆಂಡರ್‌ದಾರರು ಆದೇಶ ಕೊಟ್ಟ 7 ದಿವಸಗಳೊಳಗಾಗಿ ಸರ್ಕಾರ ನಿಗಧಿಪಡಿಸಿದ ಮೊತ್ತಕ್ಕೆ ಛಾಪಾ ಕಾಗದದಲ್ಲಿ ಪ್ರಾಧಿಕಾರದ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಸಮಕ್ಷಮ ಕರಾರು ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು.
13. ಕರಾರು ಒಪ್ಪಂದ ಮಾಡಿಕೊಂಡ ಗುತ್ತಿಗೆದಾರರು ಆದೇಶ ಕೊಟ್ಟ 7 ದಿನಗಳ ಒಳಗಾಗಿ ಪ್ರಾಧಿಕಾರದ ವಲಯ ಅರಣ್ಯಾಧಿಕಾರಿಗಳ ಮಾರ್ಗದರ್ಶನದಲ್ಲಿ ಕಾಮಗಾರಿಗಳನ್ನು ನಿರ್ವಹಿಸುವುದು.
14. ಟೆಂಡರ್‌ನ ಅನುಸೂಚಿಯಲ್ಲಿ ನಮೂದಿಸಿರುವ ಕಾಮಗಾರಿಗಳಿಗೆ ಇಡಲಾದ ಮೊತ್ತಕ್ಕೆ ನೀವು ಬಿಡ್ ಮಾಡಲಾದ ಟೆಂಡರ್‌ನ ಮೊತ್ತವನ್ನು ಶೇಕಡವಾರು ಲೆಕ್ಕಹಾಕಿ ಸದರಿ ಶೇಕಡವಾರು ದರದಂತೆ ಮಂಜೂರಾತಿ ದೊರೆತ ಅಂದಾಜು ಪಟ್ಟಿಯ ಮೊತ್ತಕ್ಕೆ ಶೇಕಡವಾರು ಲೆಕ್ಕಹಾಕಿ ಬಿಲ್ ಪಾವತಿಗೆ ಕ್ರಮವಹಿಸಲಾಗುವುದು. ಸದರಿ ಷರತ್ತಿಗೆ ಟೆಂಡರ್‌ದಾರರು ಬದ್ದರಿರಬೇಕು.
15. ಟೆಂಡರ್‌ದಾರರು ಟೆಂಡರ್ ದಿನಾಂಕದಂದು ಅರಣ್ಯ ಗುತ್ತಿಗೆದಾರರಾಗಿ ಹೆಸರು ನೊಂದಾಯಿಸಿಕೊಳ್ಳಲು ಅರ್ಜಿ ಸಲ್ಲಿಸಿದ್ದಲ್ಲಿ, ಆ ದಿನವೇ ಅರಣ್ಯ ಗುತ್ತಿಗೆದಾರರನ್ನಾಗಿ ಪರಿಗಣಿಸುವುದಿಲ್ಲ.
16. ಟೆಂಡರ್ ಮಂಜೂರಾತಿಯ ಬಗ್ಗೆ ಮೇಲಾಧಿಕಾರಿಗಳಿಂದ ಆದೇಶ ಬಂದ ನಂತರ ತಿಳಿಸಲಾಗುವುದು. ಅಲ್ಲಿಯವರೆಗೆ 2ನೇ ಅತಿ ಕಡಿಮೆ ಟೆಂಡರ್ ದರ ನಮೂದಿಸಿರುವ ಗುತ್ತಿಗೆದಾರರ ಇ.ಎಂ.ಡಿ. ಹಣವನ್ನು ಹಿಂತಿರುಗಿಸಲಾಗುವುದಿಲ್ಲ ಹಾಗೂ ಈ ಅವಧಿಯಲ್ಲಿ ಟೆಂಡರನ್ನು ವಾಪಸ್ಸು ಪಡೆಯಲು ಅವಕಾಶವಿರುವುದಿಲ್ಲ.
17. ಅತೀ ಕಡಿಮೆ ಒಂದೇ ದರವನ್ನು ಸೂಚಿಸಿರುವ ಟೆಂಡರ್ ಒಂದಕ್ಕಿಂತ ಹೆಚ್ಚು ಬಂದಲ್ಲಿ ಅದರಲ್ಲಿ ಒಂದು ಟೆಂಡರನ್ನು ಮಾತ್ರ ಒಪ್ಪಿಕೊಳ್ಳುವ ಅಧಿಕಾರ ಪ್ರಾಧಿಕಾರಕ್ಕೆ ಇರುತ್ತದೆ. ಇಂತಹ ಸಂದರ್ಭದಲ್ಲಿ ಕಳೆದ ಐದು ವರ್ಷದಲ್ಲಿ ಹೆಚ್ಚು ವಾರ್ಷಿಕ Turn over ಹೊಂದಿರುವ ಗುತ್ತಿಗೆದಾರರನ್ನು ಆಯ್ಕೆ ಮಾಡಲಾಗುವುದು.
18. ಗುತ್ತಿಗೆದಾರರು ಗುತ್ತಿಗೆಯನ್ನು ಅಥವಾ ಯಾವುದೇ ಭಾಗವನ್ನು ಇತರರಿಗೆ ಉಪ ಗುತ್ತಿಗೆ ನೀಡುವಂತಿಲ್ಲ. ಹಾಗೂ ವರ್ಗಾಯಿಸುವಂತಿಲ್ಲ.
19. ಕಾಮಗಾರಿಯು ಪ್ರಗತಿಯಲ್ಲಿರುವಾಗ ಯಾವುದೇ ಕೂಲಿಯಾಳುಗಳು ದೈಹಿಕವಾಗಿ ಗಾಯಗೊಂಡಲ್ಲಿ ಕಾರ್ಮಿಕರ ಶುಶ್ರೂಷೆಗಾಗಿ ತಗಲುವ ವೆಚ್ಚ ಅಥವಾ ಮರಣ ಹೊಂದಿದಲ್ಲಿ ಅಂತಹ ಪ್ರಕರಣಗಳಿಗೆ ಪರಿಹಾರ ಧನ ನೀಡುವ ಸಂಪೂರ್ಣ ಹೊಣೆ ಗುತ್ತಿಗೆದಾರರದೇ ಆಗಿರುತ್ತದೆ. ಇಂತಹ ಪ್ರಕರಣಗಳಲ್ಲಿ ಪ್ರಾಧಿಕಾರವಾಗಲೀ, ಪ್ರಾಧಿಕಾರದ ಸಿಬ್ಬಂದಿಗಳಾಗಲೀ, ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿರುವ ಅರಣ್ಯ ವಿಭಾಗದ ಸಿಬ್ಬಂದಿಗಳಿಗೆ KRIDE ಸಂಸ್ಥೆ ಆಗಲೀ ಯಾವುದೇ ರೀತಿಯಲ್ಲಿ ಹೊಣೆಯಾಗಿರುವುದಿಲ್ಲ. ಕಾಮಗಾರಿ ಪ್ರಗತಿಯಲ್ಲಿರುವಾಗ ಗುತ್ತಿಗೆದಾರರಿಂದ ಕಾಮಗಾರಿಯನ್ನು ಕೈಗೊಳ್ಳಲು ನೇಮಿಸಿರುವ ಯಾವುದೇ ವ್ಯಕ್ತಿಗೆ ಅಪಘಾತ, ಗಾಯ ಅಥವಾ ಪ್ರಾಣಹಾನಿ ಆದಲ್ಲಿ ಮತ್ತು ಆಸ್ತಿಗಳಿಗೆ/ಆಸ್ತಿಗಳಿಂದ ಹಾನಿಗಳಾದ್ದಲ್ಲಿ ಅದಕ್ಕೆ ಸಂಪೂರ್ಣವಾಗಿ ಗುತ್ತಿಗೆದಾರರೇ ಜವಬ್ದಾರಿಯಾಗಿರುತ್ತಾರೆ ಎಂದು ಎಲ್ಲಾ ಸಂಧರ್ಬಗಳಲ್ಲಿ ಪರಿಗಣಿಸಲಾಗುವುದು ಮತ್ತು ಇದಕ್ಕೆ ಗುತ್ತಿಗೆದಾರರೇ ಬದ್ದರಾಗಿರಬೇಕು.
20. ನಿಗಧಿತ ಕಾಲಾವಧಿಯೊಳಗಾಗಿ ಗುತ್ತಿಗೆದಾರರು ಕಾಮಗಾರಿಗಳನ್ನು ಪೂರ್ಣಗೊಳಿಸತಕ್ಕದ್ದು. ಯಾವುದೇ ಕಾರಣಕ್ಕೂ ಕಾಲಾವಧಿಯನ್ನು ವಿಸ್ತರಿಸಲಾಗುವುದಿಲ್ಲ.
21. ಗುತ್ತಿಗೆದಾರರ ಅಧೀನದಲ್ಲಿ ಕಾರ್ಯ ನಿರ್ವಹಿಸುವ ಕಾರ್ಮಿಕರು ಅರಣ್ಯ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದಲ್ಲಿ ಅಂತಹವರ ವಿರುದ್ದ ಹಾಗೂ ಗುತ್ತಿಗೆದಾರರ ವಿರುದ್ದ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.
22. ಗುತ್ತಿಗೆದಾರನು ಕೂಲಿ ಕಾರ್ಮಿಕರ ನಿಯೋಜನೆಗೆ ಸಂಬಂಧಿಸಿದಂತೆ ಕೆಳಕಂಡ ಶಾಸನಗಳಿಗೆ ಬದ್ಧನಾಗಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. i) Work mans Compensation Act 1923, ii)

Payment of wages Act 1935, iii) Minimum wage Act 1948, iv) Child labour Act 1938 v) Employer's liability Act 1938, vi) Other Acts of Central & State that may applicable time to time.

23. ಟೆಂಡರ್ ಒಪ್ಪಂದ/ಕರಾರಿನಿಂದ ಉದ್ಭವಿಸಬಹುದಾದಂತಹ ಯಾವುದೇ ವ್ಯಾಜ್ಯ ಅಥವಾ ವಿವಾದ ಕ್ಲೇಮುಗಳನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಉಭಯ ಪಕ್ಷದವರು ಅಂತಹ ವಿವಾದವನ್ನು ಕರ್ನಾಟಕ Arbitration ಕೇಂದ್ರ (ದೇಶಿಯ, ಅಂತರ್‌ದೇಶಿಯ), ನಿಯಮಗಳು 2012 ರಡಿಯಲ್ಲಿ ನೇಮಕಗೊಂಡ ಒಬ್ಬರು ಅಥವಾ ಹಲವು ಪಂಚಾಯತ್‌ದಾರರ ಮೂಲಕ ಪರಿಹರಿಸಲು ಒಪ್ಪಿಕೊಳ್ಳಬೇಕಾಗುತ್ತದೆ.

24. ಟೆಂಡರ್ ಪ್ರಕಟಣೆಯ ಯಾವುದೇ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಮರು ಟೆಂಡರ್ ಕರೆದು ಕೆಲಸ ಮಾಡಿಸುವ, ಯಾವುದೇ ಕಾರಣವನ್ನು ನೀಡದೆ ಟೆಂಡರನ್ನು ರದ್ದು ಪಡಿಸುವ ಅಧಿಕಾರವು ಈ ಕೆಳ ಸಹಿದಾರರಿಗಿರುತ್ತದೆ ಹಾಗೂ ಯಶಸ್ವಿ ಬಿಡ್‌ದಾರರು ನಂತರ ಟೆಂಡರ್‌ನಿಂದ ಹಿಂದೆ ಸರಿದಲ್ಲಿ ಸದರಿ ಗುತ್ತಿಗೆದಾರರನ್ನು ಕಪ್ಪು ಪಟ್ಟಿಯಲ್ಲಿ ಸೇರಿಸಿ ಮುಂದಿನ ಯಾವುದೇ ಪ್ರಾಧಿಕಾರದ ಅರಣ್ಯ ವಿಭಾಗದ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡುವುದಿಲ್ಲ ಹಾಗೂ ಇ.ಎಂ.ಡಿ./ಭದ್ರತಾ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು,

25. ಈ ಕ್ರಮದಿಂದ ಪ್ರಾಧಿಕಾರಕ್ಕೆ ಆಗಬಹುದಾದ ನಷ್ಟವನ್ನು ಮೂಲ ವಿಜೇತ ಟೆಂಡರುದಾರರು ಕಟ್ಟಿ ಕೊಡಲು ವಿಫಲರಾದರೆ ಸದರಿ ಮೊತ್ತವನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 109ರಂತೆ ಭೂಕಂದಾಯ ಬಾಕಿ ರೂಪದಲ್ಲಿ ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

26. ಮಾನ್ಯ ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರ ಟೆಂಡರ್ ಆದೇಶದ ಬಗ್ಗೆ ತೃಪ್ತಿ ಇಲ್ಲವಾದರೆ, ಪ್ರಾಧಿಕಾರದ ಮಂಡಳಿಗೆ ಮೇಲ್ಮನವಿ ಸಲ್ಲಿಸಬಹುದು ಹಾಗೂ ಅವರು ನೀಡುವ ತೀರ್ಪು ಅಂತಿಮವಾದುದು.

27. ಟೆಂಡರನ್ನು ಅಂಗೀಕರಿಸುವ ಅಥವಾ ನಿರಾಕರಿಸುವ ಅಧಿಕಾರವನ್ನು ಈ ಕೆಳಸಹಿ ಮಾಡಿರುವವರಿಗೆ ಅಥವಾ ಈ ಕೆಳಸಹಿದಾರರ ಮೇಲಾಧಿಕಾರಿಗಳಿಗೆ ಕಾಯ್ದಿರಿಸಲಾಗಿದೆ.

28. ಹೆಚ್ಚಿನ ವಿವರಗಳು ಬೇಕಾದಲ್ಲಿ ಪ್ರಾಧಿಕಾರದ ವಲಯ ಅರಣ್ಯಾಧಿಕಾರಿಗಳ ಕಛೇರಿಯಲ್ಲಿ, ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ. ಸಂಪರ್ಕ ಮಾಡಬೇಕಾದ ಇ-ಮೇಲ್ ವಿಳಾಸ: bdadcf2024@gmail.com.

29. ಸದರಿ ಕಾಮಗಾರಿಗಳ 2026-27 ನೇ ಸಾಲಿನ ನಿರ್ವಹಣಾ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸುವುದು ವಿಳಂಬವಾದಲ್ಲಿ, ಯಶಸ್ವಿ ಬಿಡ್ದುದಾರರು ಪ್ರಸಕ್ತ ಟೆಂಡರ್ ನಲ್ಲಿ ಅಂಗೀಕರಿಸಿರುವ ದರದಂತೆಯೇ ಟೆಂಡರ್ ಆಹ್ವಾನಿಸುವವರೆಗೂ ಕಡ್ಡಾಯವಾಗಿ ನಿರ್ವಹಿಸಲು ಬದ್ದರಿರಬೇಕು.

30. ಮೀಸಲಾತಿ ಯಡಿಯಲ್ಲಿ ಬಿಡ್ ಮಾಡುವ ಬಿಡ್ ದಾರರು ಸಂಬಂಧಿಸಿದ, ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

31. KRIDE ಸಂಸ್ಥೆಯೊಂದಿಗೆ ಮಾಡಿಕೊಂಡಿರುವ MoU ಪ್ರಕಾರ 12 ಪರಿಹಾರಾತ್ಮಕ ನೆಡುತೋಪು ನಿರ್ಮಾಣ ಕಾಮಗಾರಿಗಳು ಮಾರ್ಚ್ 2026 ಕ್ಕೆ ಅಂತ್ಯಗೊಳ್ಳಲಾಗಿದ್ದು ಸದರಿ ನೆಡುತೋಪುಗಳ ಮುಂದಿನ 03 ವರ್ಷಗಳ ನಿರ್ವಹಣೆ ಕಾಮಗಾರಿಗಳಿಗೆ ಹೊರಡಿಸಿರುವ ಈ ಪ್ರಕಟಣೆಯಲ್ಲಿ ಯಶಸ್ವಿ ಎಲ್-1 ಬಿಡ್ ದಾರರಿಗೆ ನೀಡುವ ಕರಾರು ನಾಮೆ ಹಾಗೂ ಕಾರ್ಯಾದೇಶದ ಷರತ್ತಿನಂತೆ ಕಾಮಗಾರಿಯನ್ನು ನಿರ್ವಹಿಸತಕ್ಕದ್ದು ಹಾಗೂ ನಂತರ ಆಯಾ ಸಾಲಿನಲ್ಲಿ KRIDE ಸಂಸ್ಥೆಯ ಅನುದಾನವು ಬಿಡುಗಡೆಯಾದ ನಂತರ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಬಿಲ್ಲನ್ನು ಪಾವತಿಸಲಾಗುವುದು ಇದಕ್ಕೆ ಬದ್ದರಿರಬೇಕು.

ವಿಶೇಷ ಷರತ್ತುಗಳು:-

01. ತಾಂತ್ರಿಕ ಬಿಡ್‌ಗಳಲ್ಲಿ ಅರ್ಹವಾದ ಆರ್ಥಿಕ ಬಿಡ್ ಗಳನ್ನು ತೆರೆಯುವ ಸಂದರ್ಭದಲ್ಲಿ ಒಂದು ಕಾಮಗಾರಿಗೆ ಸಂಬಂಧಿಸಿದಂತೆ ಟೆಂಡರ್ ದಾರರು ಸಲ್ಲಿಸುವ ಬಿಡ್ ನ ಮೊತ್ತ ಹಾಗೂ ಅಂದಾಜು ಮೊತ್ತಗಳ ನಡುವಿನ ವ್ಯತ್ಯಾಸದ ಮೊತ್ತವು ಶೇಕಡ 20 ಕ್ಕಿಂತ ಅಧಿಕವಾದ್ದಲ್ಲಿ ಸದರಿ ಬಿಡ್ ಅನ್ನು ಕಡ್ಡಾಯವಾಗಿ ತಿರಸ್ಕರಿಸಲಾಗುವುದು.

02. ಒಬ್ಬ ಟೆಂಡರ್ ದಾರರು ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳಲ್ಲಿ ಅಂದರೆ ಸದರಿ ಟೆಂಡರ್ ಪ್ರಕಟಣೆಯ ಎಲ್ಲಾ 12 ಕಾಮಗಾರಿಗಳಲ್ಲಿಯೂ ಯಶಸ್ವಿ ಬಿಡ್ ದಾರರಾದರೂ ಸಹ ಕನಿಷ್ಠ ಬಿಡ್ ದರ

Payment of wages Act 1935, iii) Minimum wage Act 1948, iv) Child labour Act 1938 v) Employer's liability Act 1938, vi) Other Acts of Central & State that may applicable time to time.

23. ಟೆಂಡರ್ ಒಪ್ಪಂದ/ಕರಾರಿನಿಂದ ಉದ್ಭವಿಸಬಹುದಾದಂತಹ ಯಾವುದೇ ವ್ಯಾಜ್ಯ ಅಥವಾ ವಿವಾದ ಕ್ಲೇಮುಗಳನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಉಭಯ ಪಕ್ಷದವರು ಅಂತಹ ವಿವಾದವನ್ನು ಕರ್ನಾಟಕ Arbitration ಕೇಂದ್ರ (ದೇಶಿಯ, ಅಂತರ್‌ದೇಶಿಯ), ನಿಯಮಗಳು 2012 ರಡಿಯಲ್ಲಿ ನೇಮಕಗೊಂಡ ಒಬ್ಬರು ಅಥವಾ ಹಲವು ಪಂಚಾಯತ್‌ದಾರರ ಮೂಲಕ ಪರಿಹರಿಸಲು ಒಪ್ಪಿಕೊಳ್ಳಬೇಕಾಗುತ್ತದೆ.

24. ಟೆಂಡರ್ ಪ್ರಕಟಣೆಯ ಯಾವುದೇ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಮರು ಟೆಂಡರ್ ಕರೆದು ಕೆಲಸ ಮಾಡಿಸುವ, ಯಾವುದೇ ಕಾರಣವನ್ನು ನೀಡದೆ ಟೆಂಡರನ್ನು ರದ್ದು ಪಡಿಸುವ ಅಧಿಕಾರವು ಈ ಕೆಳ ಸಹಿದಾರರಿಗಿರುತ್ತದೆ ಹಾಗೂ ಯಶಸ್ವಿ ಬಿಡ್‌ದಾರರು ನಂತರ ಟೆಂಡರ್‌ನಿಂದ ಹಿಂದೆ ಸರಿದಲ್ಲಿ ಸದರಿ ಗುತ್ತಿಗೆದಾರರನ್ನು ಕಪ್ಪು ಪಟ್ಟಿಯಲ್ಲಿ ಸೇರಿಸಿ ಮುಂದಿನ ಯಾವುದೇ ಪ್ರಾಧಿಕಾರದ ಅರಣ್ಯ ವಿಭಾಗದ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡುವುದಿಲ್ಲ ಹಾಗೂ ಇ.ಎಂ.ಡಿ./ಭದ್ರತಾ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು,

25. ಈ ಕ್ರಮದಿಂದ ಪ್ರಾಧಿಕಾರಕ್ಕೆ ಆಗಬಹುದಾದ ನಷ್ಟವನ್ನು ಮೂಲ ವಿಜೇತ ಟೆಂಡರುದಾರರು ಕಟ್ಟಿ ಕೊಡಲು ವಿಫಲರಾದರೆ ಸದರಿ ಮೊತ್ತವನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 109ರಂತೆ ಭೂಕಂದಾಯ ಬಾಕಿ ರೂಪದಲ್ಲಿ ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

26. ಮಾನ್ಯ ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರ ಟೆಂಡರ್ ಆದೇಶದ ಬಗ್ಗೆ ತೃಪ್ತಿ ಇಲ್ಲವಾದರೆ, ಪ್ರಾಧಿಕಾರದ ಮಂಡಳಿಗೆ ಮೇಲ್ಮನವಿ ಸಲ್ಲಿಸಬಹುದು ಹಾಗೂ ಅವರು ನೀಡುವ ತೀರ್ಮ ಅಂತಿಮವಾದುದು.

27. ಟೆಂಡರನ್ನು ಅಂಗೀಕರಿಸುವ ಅಥವಾ ನಿರಾಕರಿಸುವ ಅಧಿಕಾರವನ್ನು ಈ ಕೆಳಸಹಿ ಮಾಡಿರುವವರಿಗೆ ಅಥವಾ ಈ ಕೆಳಸಹಿದಾರರ ಮೇಲಾಧಿಕಾರಿಗಳಿಗೆ ಕಾಯ್ದಿರಿಸಲಾಗಿದೆ.

28. ಹೆಚ್ಚಿನ ವಿವರಗಳು ಬೇಕಾದಲ್ಲಿ ಪ್ರಾಧಿಕಾರದ ವಲಯ ಅರಣ್ಯಾಧಿಕಾರಿಗಳ ಕಛೇರಿಯಲ್ಲಿ, ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ. ಸಂಪರ್ಕ ಮಾಡಬೇಕಾದ ಇ-ಮೇಲ್ ವಿಳಾಸ: bdadcf2024@gmail.com.

29. ಸದರಿ ಕಾಮಗಾರಿಗಳ 2026-27 ನೇ ಸಾಲಿನ ನಿರ್ವಹಣಾ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸುವುದು ವಿಳಂಬವಾದಲ್ಲಿ, ಯಶಸ್ವಿ ಬಿಡ್ದುದಾರರು ಪ್ರಸಕ್ತ ಟೆಂಡರ್ ನಲ್ಲಿ ಅಂಗೀಕರಿಸಿರುವ ದರದಂತೆಯೇ ಟೆಂಡರ್ ಆಹ್ವಾನಿಸುವವರೆಗೂ ಕಡ್ಡಾಯವಾಗಿ ನಿರ್ವಹಿಸಲು ಬದ್ದರಿರಬೇಕು.

30. ಮೀಸಲಾತಿ ಯಡಿಯಲ್ಲಿ ಬಿಡ್ ಮಾಡುವ ಬಿಡ್ ದಾರರು ಸಂಬಂಧಿಸಿದ, ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

31. KRIDE ಸಂಸ್ಥೆಯೊಂದಿಗೆ ಮಾಡಿಕೊಂಡಿರುವ MoU ಪ್ರಕಾರ 12 ಪರಿಹಾರಾತ್ಮಕ ನೆಡುತೋಪು ನಿರ್ಮಾಣ ಕಾಮಗಾರಿಗಳು ಮಾರ್ಚ್ 2026 ಕ್ಕೆ ಅಂತ್ಯಗೊಳ್ಳಲಾಗಿದ್ದು ಸದರಿ ನೆಡುತೋಪುಗಳ ಮುಂದಿನ 03 ವರ್ಷಗಳ ನಿರ್ವಹಣೆ ಕಾಮಗಾರಿಗಳಿಗೆ ಹೊರಡಿಸಿರುವ ಈ ಪ್ರಕಟಣೆಯಲ್ಲಿ ಯಶಸ್ವಿ ಎಲ್-1 ಬಿಡ್ ದಾರರಿಗೆ ನೀಡುವ ಕರಾರು ನಾಮೆ ಹಾಗೂ ಕಾರ್ಯಾದೇಶದ ಷರತ್ತಿನಂತೆ ಕಾಮಗಾರಿಯನ್ನು ನಿರ್ವಹಿಸತಕ್ಕದ್ದು ಹಾಗೂ ನಂತರ ಆಯಾ ಸಾಲಿನಲ್ಲಿ KRIDE ಸಂಸ್ಥೆಯ ಅನುದಾನವು ಬಿಡುಗಡೆಯಾದ ನಂತರ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಬಿಲ್ಲನ್ನು ಪಾವತಿಸಲಾಗುವುದು ಇದಕ್ಕೆ ಬದ್ದರಿರಬೇಕು.

<u>ವಿಶೇಷ ಷರತ್ತುಗಳು:-</u>

01. ತಾಂತ್ರಿಕ ಬಿಡ್‌ಗಳಲ್ಲಿ ಅರ್ಹವಾದ ಆರ್ಥಿಕ ಬಿಡ್ ಗಳನ್ನು ತೆರೆಯುವ ಸಂದರ್ಭದಲ್ಲಿ ಒಂದು ಕಾಮಗಾರಿಗೆ ಸಂಬಂಧಿಸಿದಂತೆ ಟೆಂಡರ್ ದಾರರು ಸಲ್ಲಿಸುವ ಬಿಡ್ ನ ಮೊತ್ತ ಹಾಗೂ ಅಂದಾಜು ಮೊತ್ತಗಳ ನಡುವಿನ ವ್ಯತ್ಯಾಸದ ಮೊತ್ತವು ಶೇಕಡ 20 ಕ್ಕಿಂತ ಅಧಿಕವಾದ್ದಲ್ಲಿ ಸದರಿ ಬಿಡ್ ಅನ್ನು ಕಡ್ಡಾಯವಾಗಿ ತಿರಸ್ಕರಿಸಲಾಗುವುದು.

02. ಒಬ್ಬ ಟೆಂಡರ್ ದಾರರು ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳಲ್ಲಿ ಅಂದರೆ ಸದರಿ ಟೆಂಡರ್ ಪ್ರಕಟಣೆಯ ಎಲ್ಲಾ 12 ಕಾಮಗಾರಿಗಳಲ್ಲಿಯೂ ಯಶಸ್ವಿ ಬಿಡ್ ದಾರರಾದರೂ ಸಹ ಕನಿಷ್ಠ ಬಿಡ್ ದರ

ಹೊಂದಿರುವಂತಹ ಗರಿಷ್ಠ 03 ಕಾಮಗಾರಿಗಳಿಗಷ್ಟೆ ಒಬ್ಬ ಟೆಂಡರ್ ದಾರರನ್ನು ಅರ್ಹರೆಂದು ಸೀಮಿತಗೊಳಿಸಲಾಗುವುದು. ಉಳಿದ ಕಾವಮಗಾರಿಗಳಿಗೆ ಎರಡನೇ ಕನಿಷ್ಠ ಅರ್ಹ ಬಿಡ್‌ದಾರರನ್ನು ಅರ್ಹ ಬಿಡ್ ದಾರರಾಗಿ ಪರಿಗಣಿಸಲಾಗುವುದು

03. ಟೆಂಡರ್‌ದಾರರು ಎಸ್.ಎಸ್.ಆರ್.ಗಿಂತ ಕಡಿಮೆ ದರವನ್ನು ಬಿಡ್ ಮಾಡಿದಲ್ಲಿ ವ್ಯತ್ಯಾಸದ ಹಣವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರ ಹೆಸರಿನಲ್ಲಿ ಡಿಡಿ ಅಥವಾ ಟಿಡಿಆರ್ ಮಾದರಿಯಲ್ಲಿ ಕರಾರು ಒಪ್ಪಂದ ಮಾಡಿಕೊಳ್ಳುವ ಮುನ್ನ ಠೇವಣಿ ಇಡುವುದು. (ಕೆಡಬ್ಲ್ಯೂ–1 ರ 24.1 & 24.2 ರಂತೆ) ಹಾಗೂ ಶೇಕಡ 5% ರಷ್ಟು ಭದ್ರತಾ ಠೇವಣಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರ ಹೆಸರಿನಲ್ಲಿ ಡಿಡಿ ಅಥವಾ ಟಿಡಿಆರ್ ಮಾದರಿಯಲ್ಲಿ ಕರಾರು ಒಪ್ಪಂದ ಮಾಡಿಕೊಳ್ಳುವ ಸಮಯದಲ್ಲಿ ಠೇವಣಿ ಇಡುವುದು. ಟೆಂಡರ್ ವ್ಯತ್ಯಾಸದ ಮೊತ್ತ ಹಾಗೂ ಭದ್ರತಾ ಠೇವಣಿ ಮೊತ್ತವನ್ನು 2026–27 ನೇ ಸಾಲಿನಿಂದ 2028–29 ನೇ ಸಾಲಿನ ವರೆಗೆ ಅಂದರೆ 03 ವರ್ಷಗಳ ನೆಡುತೋಪು ನಿರ್ವಹಣೆ ಕಾಮಗಾರಿ ಪೂರ್ಣಗೊಂಡ ನಂತರವಷ್ಟೆ ವಲಯ ಅರಣ್ಯಾಧಿಕಾರಿಗಳಿಂದ ಸಲ್ಲಿಕೆಯಾಗುವ ಮುಕ್ತಾಯ ವರದಿಯ ಆಧಾರದ ಮೇಲೆ ಹಾಗೂ ಕರಾರು ಒಪ್ಪಂದದ ಷರತ್ತಿನ ಅನ್ವಯ ಬಿಡುಗಡೆಗೊಳಿಸಲಾಗುವುದು ಎಂಬ ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಬಿಡ್ ಗಳನ್ನು ಸಲ್ಲಿಸುವುದು. ಸದರಿ ವಿಷಯದಲ್ಲಿ ಕಡ್ಡಾಯವಾಗಿ ಯಾವುದೇ ವಿನಾಯಿತಿ ಇರುವುದಿಲ್ಲ.

Note:- ಈ ಮೇಲಿನ ವಿಶೇಷ ಷರತ್ತುಗಳನ್ನು ಈ ಕೆಳಕಂಡ ಕಾಮಗಾರಿಗಳಿಗೆ ಪರಿಗಣಿಸಲಾಗಿದೆ.

i) ಸದರಿ ಟೆಂಡರ್ ಪ್ರಕಟಣೆಯ ಕಾಮಗಾರಿಗಳು ರಿಟ್ ಅರ್ಜಿ ಸಂಖ್ಯೆ 17841/2018 ರನ್ವಯ ಕರ್ನಾಟಕ ಸರ್ಕಾರದ ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು ರವರ ನಿರ್ದೇಶದನ್ವಯ ನಿರ್ಮಿಸಿರುವ ಪರಿಹಾರಾತ್ಮಕ ನೆಡುತೋಪುಗಳಾಗಿರುತ್ತವೆ.

ii) ಕರ್ನಾಟಕ ಸರ್ಕಾರದ ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು ರವರ ನಿರ್ದೇಶದನ್ವಯ ರಚಿಸಲಾಗಿರುವ ವೃಕ್ಷ ತಜ್ಞರ ಸಮಿತಿ (Tree Expert Committee) ಗೆ ಕಾಲ ಕಾಲಕ್ಕೆ ವರದಿಯನ್ನು KRIDE ಸಂಸ್ಥೆಯು ಸಲ್ಲಿಸಬೇಕಾಗಿರುವುದರಿಂದ ಉತ್ತಮ ಗುಣ ಮಟ್ಟದ ನೆಡುತೋಪು ನಿರ್ವಹಣೆ ಕಾಮಗಾರಿ ಮಾಡುವುದು ಬಹು ಮುಖ್ಯವಾಗಿರುತ್ತದೆ.

iii) ಹಾಗಾಗಿ ಸದರಿ ವಿಶೇಷ ಷರತ್ತುಗಳಿಂದ ಯಾವುದೇ ಬಿಡ್‌ದಾರರಿಗೂ ಯಾವುದೇ ವಿನಾಯಿತಿ ಇರುವುದಿಲ್ಲ ಎಂಬ ಅಂಶವನ್ನು ಗಂಭೀರವಾಗಿ ಪರಿಗಣಿಸಿ ಬಿಡ್‌ಗಳನ್ನು ಸಲ್ಲಿಸುವುದು.

ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆ ಸಂಪರ್ಕಿಸಿ ಪಡೆದುಕೊಳ್ಳಬಹುದು.

ಈ ಕಛೇರಿ ವಿಳಾಸ:–

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕೊಠಡಿ ಸಂಖ್ಯೆ # 432, ಇ–ಬ್ಲಾಕ್, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕೇಂದ್ರ ಕಛೇರಿ, ಬೆಂಗಳೂರು.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಉಪ ಅರಣ್ಯ ಸಂರಕ್ಷಣಾಧಿಕಾರಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು